ಒ.ಎಸ್.ನಂ. 175/2011, ಪಿ.ಡಬ್ಲ್ಯು. 02
ದಿನಾಂಕಃ-29.01.2015

ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ- ಶ್ರೀ ಜಿ.ಎಸ್. ವಕೀಲರಿಂದ,

1). ನಾವು ಇದೇ ನ್ಯಾಯಾಲಯದಲ್ಲಿ ಒ.ಎಸ್ 228/2011 ರ ಪ್ರಕಾರ ರಿ.ಸರ್ವೆ ನಂ. 88/1ಪಿ , 88/ಪಿ2ಪಿ 88/1ಪಿ3. ದಾವೆ ಮಾಡಿದ್ದೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿಗಳ ಪರವಾಗಿ ಜಿ. ಶರಣಪ್ಪಯ್ಯ ವಕೀಲರು ಹಾಜರಾಗಿದ್ದರು ಎಂದರೆ ಸರಿ. ಸದರಿ ದಾವೆ ಈಗಲೂ ಸಹ ಪೆಂಡಿಂಗ್ ಇದೆ ಎಂದರೆ ಸರಿ. 1996 ರಲ್ಲೂ ಸಹ ನಾನು ಒ.ಎಸ್ 228/2011 ರ ದಾವೆಯ ಪಕ್ಷಗಾರರ ವಿರುದ್ಧ ದಾವೆ ಮಾಡಿದ್ದೆ ಎಂದರೆ ಸರಿ. ಅದರಲ್ಲೂ ಸಹ ಜಿ. ಶರಣಪ್ಪಯ್ಯ ವಕೀಲರು ಇದ್ದರು ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಹಲವಾರು ಬಾರಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಬಂದು ಹೋದ ಅನುಭವ ಚೆನ್ನಾಗಿ ಇದೆ ಎಂದರೆ ಸರಿ.

2). ನಾನು ಕೈಮಗ್ಗ ನೇಕಾರರ ಸಂಘದ ಕಾರ್ಯದರ್ಶಿಯಾಗಿದ್ದೇನೆ ಎಂದರೆ ಸರಿ. ನಾನು ನಾಯಕನಹಟ್ಟಿ ಯಲ್ಲಿ ಕಿರಣ್ ಫರ್ಟಿಲೈಸರ್ ಎಂಬ ಅಂಗಡಿ ಇಟ್ಟುಕೊಂಡಿದ್ದೇನೆ ಎಂದರೆ ಸರಿ.

3) ಈ ಕೇಸಿನ 1ನೆ ಪ್ರತಿವಾದಿ ನನ್ನ ಅಂಗಡಿಯಲ್ಲಿ ಗೊಬ್ಬರ ತೆಗೆದುಕೊಂಡಾಗ ಅವರು ಬಿಲ್ ಕೇಳಿದಾಗ ನಾನು ಕೊಡದಿದ್ದ ಬಗ್ಗೆ ನಮಗೂ ಮತ್ತು ಅವರಿಗೂ ಜಗಳವಾಗಿದೆ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಹಾಗೂ ಅವರ ಮಧ್ಯೆ ವೈಮನಸ್ಸು ಇದೆ ಎಂದರೆ ಸರಿಯಲ್ಲ.

4) ನನಗೆ ಈ ದಾವೆಯ ಪಕ್ಷಗಾರರು ಗೊತ್ತು. ಅವರುಗಳೆಂದರೆ ಗೌರಮ್ಮ ಮತ್ತು ಕಣಮಕ್ಕ ಈ ದಾವೆ ಮಾಡಿರುತ್ತಾರೆ. ಅವರು ಬಿಟ್ಟು ಬೇರೆ ಯಾರೂ ಇಲ್ಲ. ಅವರು ರಂಗಪ್ಪ , ಸಣ್ಣರಂಗಪ್ಪ, ತಿಮ್ಮಣ್ಣ, ಗೌರಿಪುರದ ರಂಗಪ್ಪ, ಹಾಲಹಳ್ಳಿರಂಗಪ್ಪ ರವರ ವಿರುದ್ಧ ದಾವೆ ಮಾಡಿರುತ್ತಾರೆ. ಬೇರೆ ಯಾರೂ ಇರುವುದಿಲ್ಲ.

5) ಸದರಿ ದಾವೆಯನ್ನು ಗೌಡಗೆರೆಯ ಸರ್ವೆ ನಂ. 3 ರ 5 ಎಕರೆ 21 ಗುಂಟೆ ಬಗ್ಗೆ ಹಾಕಿರುತ್ತಾರೆ. ಅದೇ ರೀತಿ ಭೀಮಗೊಂಡನ ಹಳ್ಳಿಯ ಸರ್ವೆ ನಂ.28 2 ಎಕರೆ 6 ಗುಂಟೆಯ ಬಗ್ಗೆ ಹಾಕಿರುತ್ತಾರೆ. ನನಗೆ ಸರ್ವೆ ನಂ. 3 ರ ಪೋಡುಗಳನ್ನು ಹೇಳಲಾಗುವುದಿಲ್ಲ, ಆದರೆ 4 ಭಾಗ ಮಾಡಿಕೊಂಡಿರುತ್ತಾರೆ. ಸರ್ವೆ ನಂ. 3 ರಲ್ಲಿ 5 ಎಕರೆ 21 ಗುಂಟೆ ಮಾತ್ರ ಇದೆ, ಅದು ಬಿಟ್ಟು ಹೆಚ್ಚಿಗೆ ಜಮೀನು ಇರುವುದಿಲ್ಲ. 5 ಎಕರೆ 21 ಗುಂಟೆಯಲ್ಲಿ 1 ಮತ್ತು 2ನೇ ವಾದಿ ಸ್ವಾಧೀನದಲ್ಲಿರುತ್ತಾರೆ. 5 ಎಕರೆ 21 ಗುಂಟೆಗೆ ಚಕ್ಕುಬಂದಿ ಹೇಳಲಾಗುವುದಿಲ್ಲ.

6) ಸರ್ವೆ ನಂ. 3 ಒಟ್ಟು 18 ಎಕರೆ 9 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಪೂರ್ವಕ್ಕೆ ಮಲ್ಲೂರಹಟ್ಟಿಗೆ ಹೋಗುವ ದಾರಿ ಮತ್ತು ತಿಮ್ಮಯ್ಯನ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ತಿಮ್ಮವ್ವನ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಜಂಗಳಿ ತಿಮ್ಮಯ್ಯನ ಜಮೀನು ಇದೆ ಎಂದು ಹೇಳುತ್ತಾರೆ. ತಿಮ್ಮವ್ವನ ಜಮೀನು ಇದ್ದರೂ ಸಹ ಜಂಗಳಿ ತಿಮ್ಮಯ್ಯನ ಜಮೀನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉತ್ತರಕ್ಕೆ ಹಳ್ಳ ಇದೆ ಎಂದರೆ ಸರಿ. ದಕ್ಷಿಣ ದಿಕ್ಕಿಗೆ ಕೊಟ್ರಪ್ಪ ಮತ್ತು ಏಕಾಂತಪ್ಪ ಇವರ ಜಮೀನು ಇದೆ ಎಂದರೆ ಸರಿ. ಈ ಜಮೀನಿನ ಅಕ್ಕಪಕ್ಕದಲ್ಲಿ ನನ್ನ ಜಮೀನು ಇಲ್ಲ ಎಂದರೆ ಸರಿಯಲ್ಲ.

ಸಾಕ್ಷಿ ಮುಂದುವರಿದು ಪಶ್ಚಿಮಕ್ಕೆ ನನ್ನ ಜಮೀನು ಇದೆ ಎಂದು ಹೇಳುತ್ತಾರೆ. ಅದರ ಸರ್ವೆ ನಂ. 5.

7) ಸದರಿ ಸರ್ವೆ ನಂ. 5 ರ ಪೂರ್ವಕ್ಕೆ ಜಿನ್ನಿನ ರಂಗಪ್ಪನ ಜಮೀನು, ಪಶ್ಚಿಮಕ್ಕೆ ವಿರುಪಾಕ್ಷಿ ಜಮೀನು ಮತ್ತು ರಸ್ತೆ, ಉತ್ತರಕ್ಕೆ ಬಸಪ್ಪ ತಂದೆ ಚನ್ನಪ್ಪ ಇವರ ಜಮೀನು, ದಕ್ಷಿಣಕ್ಕೆ ಯಾಪಯ್ಯ ಇವರ ಜಮೀನು ಇದೆ. ಸರ್ವೆ ನಂ. 3 ರ ಅಕ್ಕಪಕ್ಕದಲ್ಲಿ ನನ್ನ ಜಮೀನು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8) ಸರ್ವೆ ನಂ. 3 ರಲ್ಲಿ ಗೌಡಗೆರೆಯ 1 ರಿಂದ 8 ನೇತರಗತಿವರೆಗಿನ ಶಾಲೆ ಇದೆ ಎಂದರೆ ಸರಿ. ಅದರಲ್ಲಿ ಎಎನ್‌ಎಂ ಕ್ವಾರ್ಟರ್ಸ್, ಗ್ರಾಮ ಪಂಚಾಯಿತಿ, ಮಾರಮ್ಮನ ದೇವಸ್ಥಾನ ಇದೆ ಎಂದರೆ ಸರಿ.

9) ಸರ್ವೆ ನಂ. 3 ರಲ್ಲಿ ತಿಪ್ಪಯ್ಯ, ಗೋವಿಂದಪ್ಪ, ಓಬಯ್ಯ ಬಿನ್ ಜಂಗ್ಲಿ ಓಬಯ್ಯ, ಮುದಿಯಪ್ಪ ಬಿನ್ ಕತ್ತೆಪ್ಪ, ಕಟ್ಟರಿವೆ ತಿಮ್ಮಯ್ಯ, ಗಂಟು ತಿಮ್ಮಯ್ಯ , ಕುಂಬಾರ ದೋಣಿಯಪ್ಪ , ರುದ್ರಪ್ಪ , ವೆಂಕಟೇಶ , ರಾಮಚಂದ್ರಪ್ಪ , ನಾಗೇಂದ್ರಪ್ಪ , ಮಂಜುನಾಥ ಮತ್ತು ರಾಮಪ್ಪನ ಮಗ ವೆಂಕಟೇಶ , ದೋಣಿಯಪ್ಪನ ಮಗ ಗೋವಿಂದಪ್ಪ ಇವರೆಲ್ಲರಿಗೂ ಸೇರಿರುವ ಮನೆ ಮತ್ತು ಕಣಗಳು ಪಂಚಾಯಿತಿ ಆಫೀಸಿನ ಪಶ್ಚಿಮ ಮತ್ತು ಉತ್ತರಕ್ಕೆ ಇವೆ ಎಂದರೆ ಸರಿ. ಈ ಎಲ್ಲಾ ಮನೆ ಮತ್ತು ಕಣಗಳು ಸರ್ವೆ ನಂ. 3 ರಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

10) ನನಗೆ ಸಣ್ಣರಂಗಪ್ಪನ ತಂದೆಯ ಹೆಸರು ಗೊತ್ತಿಲ್ಲ. ಸಣ್ಣ ರಂಗಪ್ಪನ ಅಣ್ಣ ತಮ್ಮಂದಿರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ಸಣ್ಣ ರಂಗಪ್ಪ ಎಂದರೆ ಗೌರಮ್ಮನ ಗಂಡನ ತಂದೆ ಎಂದರೆ ಸರಿ. ಸದರಿ ಸಣ್ಣ ರಂಗಪ್ಪನ ತಂದೆಯ ಹೆಸರು ರಂಗಪ್ಪ ಎಂದರೆ ನನಗೆ ಗೊತ್ತಿಲ್ಲ.

11) ಸದರಿ ರಂಗಪ್ಪನಿಗೆ ಸಣ್ಣ ರಂಗಪ್ಪ ಒಳಗೊಂಡಂತೆ ಒಟ್ಟು 5 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

12) ರಂಗಪ್ಪ ಇವರ ತಂದೆಯ ಹೆಸರು ಏನು ಎಂದರೆ ಸಾಕ್ಷಿಯು ಒಟ್ಟು 3 ಜನ ರಂಗಪ್ಪ ಇದ್ದಾರೆ ಯಾರ ತಂದೆಯ ಹೆಸರು ಹೇಳಬೇಕು ಎಂದು ಕೇಳುತ್ತಾರೆ.

ಸಾಕ್ಷಿ ಮುಂದುವರಿದು ಟಿ.ಜಿ. ರಂಗಪ್ಪ ಇವರ ತಂದೆ ಹೆಸರು ದೊಡ್ಡ ರಂಗಪ್ಪ, ಆದರೆ ದೊಡ್ಡ ರಂಗಪ್ಪ ಇವರ ತಂದೆಯ ಹೆಸರು ನನಗೆ ಗೊತ್ತಿಲ್ಲ.

13) ಈ ಕೇಸಿನ ವಾದಿ ಮತ್ತು ಪ್ರತಿವಾದಿಗಳ ವಂಶದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

14) ಪ್ರತಿವಾದಿಗಳಿಗೆ ಕೊಟ್ಟಿರುವ ನನ್ನ ಪ್ರಮಾಣ ಪತ್ರಿಕೆಯ ಪುಟ ಸಂ. 2 ರ 2ನೇ ಲೈನಿನಲ್ಲಿ ದಾವಾ ಸ್ವತ್ತಿನ (ಖಾಲಿ ಬಿಟ್ಟು) ದಿಕ್ಕಿಗೆ ಎಂದು ತೋರಿಸಲಾಗಿದೆ ಎಂದರೆ ಸರಿ.

15) ಸರ್ವೆ ನಂ. 28 5 ಎಕರೆ 36 ಗುಂಟೆ ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಪೂರ್ವಕ್ಕೆ ಪೂಜಾರಿ ತಿಮ್ಮಯ್ಯನ ಜಮೀನು , ಪಶ್ಚಿಮ ಮತ್ತು ಉತ್ತರಕ್ಕೆ ಹಳ್ಳ, ದಕ್ಷಿಣಕ್ಕೆ ಬೋರಯ್ಯನ ಜಮೀನು ಇದೆ.

16) ಕೌಂಟರ್ ಕ್ಲೈಮ್ ಐಟಂ ನಂ. 2 ರ ಆಸ್ತಿಯ ಪೂರ್ವಕ್ಕೆ ಪೂಜಾರಿ ತಿಮ್ಮಯ್ಯನ ಜಮೀನು, ಪಶ್ಚಿಮಕ್ಕೆ ಸಣ್ಣರಂಗಪ್ಪನ ಜಮೀನು, ಉತ್ತರಕ್ಕೆ ಕೆಂಚಪ್ಪ ಮಹಾಲಿಂಗಪ್ಪನ ಜಮೀನು ಮತ್ತು ದಕ್ಷಿಣಕ್ಕೆ ಪೋಸ್ಟ್ ಬೋರಣ್ಣನ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ ಜಮೀನು ಊರಿನಿಂದ 3 ಕಿಮೀ ಅಂತರದಲ್ಲಿ ಇದೆ ಎಂದರೆ ಸರಿ. ಈ ಜಮೀನಿನ ಅಕ್ಕಪಕ್ಕದಲ್ಲಿ ನನ್ನ ಜಮೀನು ಇಲ್ಲ ಎಂದರೆ ಸರಿ. ಈ ಜಮೀನನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ.

17) ನನಗೆ ಈಗ 43 ವರ್ಷ ವಯಸ್ಸಾಗಿರುತ್ತದೆ. ನನಗೆ 43 ವರ್ಷ ವಯಸ್ಸಾಗಿದ್ದರೂ ಸಹ 45 ಎಂದು ಪ್ರಮಾಣ ಪತ್ರಿಕೆಯಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನಗೆ 10 ವರ್ಷಕ್ಕೆ ಬುದ್ದಿ ಬಂದಿರುತ್ತದೆ.

18) ದಾವಾ ಸ್ವತ್ತನ್ನು ಸು. 50 ವರ್ಷಗಳ ಹಿಂದೆ ಜುಬಾನಿ ಪಾರೀಕತ್ತು ಮಾಡಿಕೊಂಡು ಅದರ ಪ್ರಕಾರ ವಾದಿಯರು ಮತ್ತು ಅವರ ವಾರಸುದಾರರು ಹಕ್ಕು ಮತ್ತು ಸ್ವಾಧೀನ ಹೊಂದಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜುಬಾನಿ ಪಾರೀಕತ್ತು ಮಾಡಿಕೊಂಡ ತಾರೀಖು, ತಿಂಗಳು, ವರ್ಷ ನನಗೆ ಗೊತ್ತಿಲ್ಲ. ಜುಬಾನಿ ಪಾರೀಕತ್ತು ಮಾಡಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19) ದಾವಾ ಆಸ್ತಿ ಹಾಗೂ ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನ ಮೇಲೆ ವಾದಿ ಮತ್ತು ಪ್ರತಿವಾದಿಗಳಿಗೆ 1/3 ಭಾಗದ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಎಷ್ಟು ವಿಸ್ತೀರ್ಣದ ಆಸ್ತಿ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ ವಾದಿಯರಿಗೆ ಬಿಟ್ಟು ಬೇರೆಯಾರಿಗೂ ಮಾಲೀಕತ್ವ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 50 ವರ್ಷದ ಹಿಂದೆ ಯಾರ ಮಧ್ಯ ಮೌಖಿಕ ಪಾಲು ವಿಭಾಗ ಆಯಿತು ಎಂದು ನನಗೆ ಹೇಳಲಾಗುವುದಿಲ್ಲ. ದಾವಾ ಆಸ್ತಿಗಳಲ್ಲಿ ಮತ್ತು ಕೌಂಟರ್ ಕ್ಲೈಮ್ ಆಸ್ತಿಗಳಲ್ಲಿ ಯಾವುದೇ ಪಾಲುವಿಭಾಗ ಆಗಿಲ್ಲ ಎಂದರೆ ಸರಿಯಲ್ಲ.

20) ದಾವಾ ಆಸ್ತಿಗಳಲ್ಲಿ ಹಾಗೂ ಕೌಂಟರ್ ಕ್ಲೈಮ್ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ತಲಾ 1/3 ಭಾಗದ ಹಕ್ಕು ಇದ್ದರೂ ಸಹ ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ವಾದಿಗಳ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21) ನಾನು 20 ವರ್ಷದಿಂದ ನಾಯಕನಹಟ್ಟಿ ಯಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ :- ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ. ಸರಿಯಿದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಚಳ್ಳಕೆರೆ.